**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು**

**ಸಿಸಿ ನಂ. 699/2019**

**ಫಿರ್ಯಾದುದಾರರು** : ಬೀರೂರು ಪೊಲೀಸ್ ಠಾಣೆ

**ವಿರುದ್ಧ**

**ಆರೋಪಿ** : 1. ಹೇಮಂತ ಬಿನ್ ನಾಗಪ್ಪ ಅಲಿಯಾಸ್ ನಾಗರಾಜಪ್ಪ,
ವಯಸ್ಸು ಸುಮಾರು 26 ವರ್ಷ, ಕೂಲಿ,

2. ಯೋಗೇಂದ್ರ ಬಿನ್ ಲಕ್ಷ್ಮಪ್ಪ,
ವಯಸ್ಸು ಸುಮಾರು 33 ವರ್ಷ, ಕೂಲಿ,

ಇಬ್ಬರೂ ವಾಸಃ ಹಿರೇನಲ್ಲೂರು ಗ್ರಾಮ,
ಕಡೂರು ತಾಲ್ಲೂಕು.

**ದಂಡ ಪ್ರಕ್ರಿಯ ಸಂಹಿತೆ ಕಲಂ 313 ರ ರೀತ್ಯಾ ಆರೋಪಿಯ ಹೇಳಿಕೆ**

**ಪ್ರಶ್ನೆ -1.** ಇದುವರೆವಿಗೂ ಅಭಿಯೋಜನೆಯವರ ಪರ ಹೇಳಿಕೆ ಕೊಟ್ಟಿರುವ ಸಾಕ್ಷಿದಾರರ ಹೇಳಿಕೆ ಕೇಳಿದ್ದೀರಾ?

**1 ನೇ ಆರೋಪಿ ಉತ್ತರಃ** ಹೌದು

**2 ನೇ ಆರೋಪಿ ಉತ್ತರಃ** ಹೌದು

**ಪ್ರಶ್ನೆ-2.** ಚಾಸಾ.1 ದೇವರಾಜ್ ಇವರನ್ನು ಪ್ರಾಸಾ.2 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ಚಾಸಾ.2 ತನ್ನ ತಂಗಿ ಗಂಡನಾಗಬೇಕು, ತನ್ನ ಮನೆಗೂ ಮತ್ತು ಹಿರೇನಲ್ಲೂರು ಮದ್ಯದ ಅಂಗಡಿಗೂ ಅರ್ಧ ಕಿ.ಮೀ. ಆಗುತ್ತದೆ, ಈಗ್ಗೆ ಸುಮಾರು 5 ವರ್ಷಗಳ ಹಿಂದೆ ಮದ್ಯಾಹ್ನ 12.30 ರ ಸಮಯದಲ್ಲಿ ಚಾಸಾ.3 ರವರು ಚಾಸಾ.2 ರವರಿಗೆ ತಿಮ್ಮಪ್ಪನ ಹೋಟೆಲ್ ಬಳಿ ಹಲ್ಲೆ ಮಾಡಿರುವುದಾಗಿ ಬಂದು ನನಗೆ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

ಹೇಮಂತ.

Yog..

**ಪ್ರಶ್ನೆ-3.** ಪ್ರಾಸಾ.2 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಆಗ ತಾನು ಹೋಗಿ ನೋಡಿದಾಗ ಚಾಸಾ.2 ರವರು ತಿಮ್ಮಪ್ಪನ ಹೋಟೆಲ್‌ನ ಹಿಂಭಾಗದಲ್ಲಿ ಬಿದ್ದಿದ್ದರು, ಚಾಸಾ.2 ರವರಿಗೆ ತಲೆಗೆ ಹಾಗೂ ಎದೆಗೆ ಪೆಟ್ಟಾಗಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-4.** ಪ್ರಾಸಾ.2 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಚಾಸಾ.2 ರವರಿಗೆ ಯೋಗೇಂದ್ರ ಹಾಗೂ ಆತನ ತಮ್ಮ ಹಲ್ಲೆ ಮಾಡಿರುವುದು ತನಗೆ ತಿಳಿದಿರುತ್ತದೆ, ಚಾಸಾ.2 ರವರಿಗೆ ಯೋಗೇಂದ್ರ ಹಾಗೂ ಆತನ ತಮ್ಮ ಬಾಟಲಿ ಹಾಗೂ ಇಟ್ಟಿಗೆಯಿಂದ ಹಲ್ಲೆ ಮಾಡಿರುವ ವಿಚಾರ ತಿಳಿದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-5.** ಪ್ರಾಸಾ.2 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ನಂತರ ತಾನು ಚಾಸಾ.2 ರವರನ್ನು ಬೀರೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು.

**ಪ್ರಶ್ನೆ-6.** ಪ್ರಾಸಾ.2 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಈ ಬಗ್ಗೆ ತಾನು ಪೋಲಿಸ್ ಠಾಣೆಗೆ ಹೋಗಿ ನಿಪಿ.2 ರಂತೆ ದೂರನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-7.** ಪ್ರಾಸಾ.2 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ನಂತರ ಪೋಲಿಸರು ದೂರು ಸಲ್ಲಿಸಿದ ಮೂರು ದಿನಗಳ ನಂತರ ತನ್ನನ್ನು ತಿಮ್ಮಪ್ಪನ ಹೋಟೆಲ್ ನ ಹಿಂಭಾಗಕ್ಕೆ ಕರೆದುಕೊಂಡು ಹೋಗಿರುತ್ತಾರೆ, ಆಗ ತನ್ನ ಜೊತೆ ಚಾಸಾ.9 ಹಾಗೂ ಚಾಸಾ.10 ರವರು ಇದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-8.** ಪ್ರಾಸಾ.2 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ಆ ದಿನ ಪೋಲಿಸರಿಗೆ ಘಟನಾ ಸ್ಥಳವನ್ನು ಚಾಸಾ.5 ರವರು ತೋರಿಸಿರುತ್ತಾರೆ, ಆಗ ಸ್ಥಳದಲ್ಲಿದ್ದ ಪ್ರತ್ಯಕ್ಷದರ್ಶಿಗಳು ಚಾಸಾ.5 ರವರು ಇಟ್ಟಿಗೆ ತುಂಡು ಹಾಗೂ ಹೊಡೆದ ಬಾಟಲಿಯನ್ನು ಪೋಲಿಸರಿಗೆ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-9.** ಪ್ರಾಸಾ.2 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಅಮಾನತ್ತು ಮಹಜರನ್ನು ನಿಪಿ.3 ಎಂದು ಗುರುತಿಸಿ, ಸದರಿ ಮಹಜರಿಗೆ ಠಾಣೆಯಲ್ಲಿ ಸಹಿ ಮಾಡಿರುವುದಾಗಿ ನುಡಿದು, ನಿಪಿ.4 ಮತ್ತು ನಿಪಿ.5 ರ ಛಾಯಾಚಿತ್ರಗಳಲ್ಲಿ ತಾನು ಇರುವುದಾಗಿ ಒಪ್ಪಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-10.** ಚಾಸಾ.7 ಶ್ರೀಮತಿ ರತ್ನಮ್ಮ ಇವರನ್ನು ಪ್ರಾಸಾ.7 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ಚಾಸಾ-1 ನನ್ನ ಅಣ್ಣ, ಚಾಸಾ-2 ನನ್ನ ಗಂಡ, ಚಾಸಾ-8 ನನ್ನ ಮಗಳು, ಸುಮಾರು 8 ವರ್ಷಗಳ ಹಿಂದೆ ತನ್ನ ಗಂಡ 1 ನೇ ಆರೋಪಿಗೆ ರೂ.20 ಸಾಲವನ್ನು ಮರುಪಾವತಿಸಲು ಬಾಕಿ ಇದ್ದು, ಸದರಿ ಹಣವನ್ನು ವಾಪಸ್ಸು ನೀಡುವಂತೆ 1 ನೇ ಆರೋಪಿ ಕೇಳಿದಾಗ

ಚಾಸಾ-2 ರವರು ನನ್ನ ಬಳಿ ಚಿಲ್ಲರೆ ಇಲ್ಲಾ, 5 ನಿಮಿಷದ ನಂತರ ತಂದು ಕೊಡುತ್ತೇನೆ ಎಂದು ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-11.** ಪ್ರಾಸಾ.7 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ನೀನು 20 ರೂಪಾಯಿ ಕೊಡದಿದ್ದರೂ ಪರವಾಗಿಲ್ಲ, ಬಾ ಇಲ್ಲಿ ಎಂದು ಕರೆದು ತಿಮ್ಮಣ್ಣನ ಹೋಟೆಲ್ ಹಿಂಭಾಗ ಕರೆದುಕೊಂಡು ಹೋಗಿ ಅಲ್ಲಿ ಬಿದ್ದಿದ್ದ ಬೀಯರ್ ಬಾಟಲ್ ನಿಂದ ಚಾಸಾ-2 ರವರ ಎದೆಗೆ, ಬೆನ್ನಿಗೆ ಹಲ್ಲೆ ಮಾಡಿ ರಕ್ತಗಾಯ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-12.** ಪ್ರಾಸಾ.7 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ನಂತರ ಬಲಗೈಗೆ ಬಾಟಲಿಯಿಂದ ಹಲ್ಲೆ ಮಾಡಿದ್ದು, ಗಾಯಗೊಂಡ ತನ್ನ ಗಂಡನನ್ನು ಚಾಸಾ-1 ರವರು ಮನೆಯಲ್ಲಿದ್ದ ನಮಗೆ ವಿಚಾರ ತಿಳಿಸಿದಾಗ ನಾನು, ಚಾಸಾ-1 ಮತ್ತು ಚಾಸಾ-8 ರವರು ಸ್ಥಳಕ್ಕೆ ಹೋಗಿ ನೋಡಿದಾಗ, ಚಾಸಾ-2 ರವರು ಅಂಗಾತ ಬಿದ್ದಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-13.** ಪ್ರಾಸಾ.7 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ಅವರ ಎದೆಯ ಒಳಗಡೆ ಬೀಯರ್ ಬಾಟಲ್ ಇತ್ತು, ನಾವುಗಳು ಆತನನ್ನು ಬೀರೂರು ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿ, ಅಲ್ಲಿಂದ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ರವಾನಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

ಶೀಲವಂತೆ

**ಪ್ರಶ್ನೆ-14.** ಪ್ರಾಸಾ.7 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ಈ ವಿಚಾರವಾಗಿ ತಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ನುಡಿದು, 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-15.** ಪ್ರಾಸಾ.7 ರವರನ್ನು ಅಭಿಯೋಜನೆಯವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ ದಿನಾಂಕಃ21.06.2017 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಗಲಾಟೆಯಾದ ವಿಚಾರವನ್ನು ಚಾಸಾ.1 ರವರು ನನಗೆ ತಿಳಿಸಿರುತ್ತಾರೆ ಎಂದು, ಹಾಗೂ ಆರೋಪಿತರು ಚಾಸಾ.2 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ, ಈ ವಿಚಾರವಾಗಿ ಚಾಸಾ.1 ರವರು ಬೀರೂರು ಪೋಲಿಸರಿಗೆ ದೂರು ನೀಡಿರುತ್ತಾರೆ ಎಂದು ಸೂಚಿಸಿದ ಸೂಚನೆಗಳನ್ನು ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-16.** ಚಾಸಾ.8 ಬಿಂದು ಇವರನ್ನು ಪ್ರಾಸಾ.8 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ಚಾಸಾ-1 ನನ್ನ ಮಾವ, ಚಾಸಾ-2 ನನ್ನ ತಂದೆ, ಚಾಸಾ-7 ನನ್ನ ತಾಯಿ, ಆರೋಪಿತರು ನನಗೆ ಗೊತ್ತು ಅವರು ನಮ್ಮ ಊರಿನವರು, 2017 ನೇ ಸಾಲಿನಲ್ಲಿ ಸಂಜೆ 5.30 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಚಾಸಾ-1 ರವರು ಮನೆಗೆ ಬಂದು ಚಾಸಾ-2 ರವರಿಗೆ ಆರೋಪಿತರು ಹೋಟೆಲ್ ಹಿಂಭಾಗ ಹಲ್ಲೆ ಮಾಡಿರುತ್ತಾರೆ ಎಂದು ವಿಚಾರ ತಿಳಿಸಿರುತ್ತಾರೆ ಎಂದು ನುಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

ಹೇಳಿಕೆ (ಸಹಿ)

**ಪ್ರಶ್ನೆ-17.** ಪ್ರಾಸಾ.8 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ನಾನು, ಚಾಸಾ-1 ಮತ್ತು ಚಾಸಾ-7 ರವರು ಹೋಗಿ ನೋಡಿದಾಗ, ಚಾಸಾ-2 ರವರು ಗೋಡೆಗೆ ಒರಗಿ ಕುಳಿತಿದ್ದರು. ಅವರ ತಲೆಗೆ, ಕೈಗೆ, ಎದೆಗೆ, ಬೆನ್ನಿಗೆ ಗಾಯವಾಗಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-18.** ಪ್ರಾಸಾ.8 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ಕೇಳಿದಾಗ ಚಾಸಾ-2 ರವರು ಆರೋಪಿತರು ಬಾಟಲಿಯಿಂದ ಎದೆಗೆ, ಕಲ್ಲಿನಿಂದ ತಲೆಗೆ, ಬೆನ್ನಿಗೆ ಹಲ್ಲೆ ಮಾಡಿರುವ ವಿಚಾರ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-19.** ಪ್ರಾಸಾ.8 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ರೂ.20 ಸಾಲದ ವಿಚಾರವಾಗಿ ಹಲ್ಲೆ ಮಾಡಿದ್ದು, ಚಾಸಾ-2 ರವರನ್ನು ನಾನು, ಚಾಸಾ-1 ಮತ್ತು ಚಾಸಾ-7 ರವರು ಬೀರೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-20.** ಪ್ರಾಸಾ.8 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ಚಾಸಾ-2 ರವರ ಎದೆಯಲ್ಲಿ ಬೀಯರ್ ಬಾಟಲಿಯ ಚೂರು ಉಳಿದಿದ್ದು, ಘಟನೆ ಸಂಬಂಧ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ನುಡಿದು, ನ್ಯಾಯಾಲಯದ ಮುಂದೆ ಇದ್ದ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

ಹೇಮಂತ

**ಪ್ರಶ್ನೆ-21.** ಪ್ರಾಸಾ.8 ರವರನ್ನು ಅಭಿಯೋಜನೆಯವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ ದಿನಾಂಕಃ21.06.2017 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಗಲಾಟೆಯಾದ ವಿಚಾರವನ್ನು ಚಾಸಾ.1 ರವರು ತಿಳಿಸಿರುತ್ತಾರೆ ಹಾಗೂ ಆರೋಪಿತರು ಚಾಸಾ.2 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಸೂಚಿಸಿದ ಸೂಚನೆಗಳನ್ನು ಒಪ್ಪಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-22.** ಚಾಸಾ.14 ರವರನ್ನು ಪ್ರಾಸಾ.9 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ23.06.2017 ರಂದು ಸಂಜೆ 6.00 ಗಂಟೆ ಸಮಯದಲ್ಲಿ ತಾನು ಬೀರೂರು ಪೋಲೀಸ್ ಠಾಣೆಯಲ್ಲಿ ಠಾಣಾ ಪ್ರಭಾರೆಯಲ್ಲಿದ್ದಾಗ, ಚಾಸಾ-1 ರವರು ನಿಪಿ-2 ರಂತೆ ನೀಡಿರುವ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 112082017 ರಂತೆ ಪ್ರಕರಣ ದಾಖಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು.

**ಪ್ರಶ್ನೆ-23.** ಪ್ರಾಸಾ.9 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ಅದೇ ದಿನ ಸಂಜೆ 5.00 ಗಂಟೆಗೆ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಚಾಸಾ-9 ಮತ್ತು ಚಾಸಾ-10 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನಿಪಿ-3 ರಂತೆ ಮಹಜರನ್ನು ಜರುಗಿಸಿ ಕಚ್ಚಾ ನಕ್ಷೆ ತಯಾರಿಸಿ, ಅದೇ ಸಮಯದಲ್ಲಿ, ನಿಪಿ-4 ಮತ್ತು 5 ರಂತೆ ಛಾಯಾಚಿತ್ರ ತೆಗೆಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-24.** ಪ್ರಾಸಾ.9 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ಅದೇ ಸಮಯದಲ್ಲಿ ಮುದ್ದೆಮಾಲು-1 ಮತ್ತು ಮುದ್ದೆಮಾಲು-2 ನ್ನು ವಶಪಡಿಸಿಕೊಂಡು ಠಾಣಾ ಪಿ.ಎಫ್.ಸಂ.

70/2017 ರಂತೆ ಅಳವಡಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-25.** ಪ್ರಾಸಾ.9 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕಃ24.06.2017 ರಂದು ಸಾಕ್ಷಿದಾರರಾದ ಚಾಸಾ-3 ರಿಂದ ಚಾಸಾ-8 ರವರ ಹೇಳಿಕೆಯನ್ನು ನಿಪಿ-6 ರಿಂದ ನಿಪಿ-8 ರಂತೆ ದಾಖಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-26.** ಪ್ರಾಸಾ.9 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ಚಾಸಾ-2 ರವರ ಎರಡು ಗಾಯದ ಪ್ರಮಾಣ ಪತ್ರಗಳನ್ನು ಚಾಸಾ-11 ಮತ್ತು 12 ರವರಿಂದ ನಿಪಿ.10 ಮತ್ತು ನಿಪಿ.11 ರಂತೆ ಪಡೆದಿದ್ದು, ನಂತರ ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ ಎಂದು ನುಡಿದು ನ್ಯಾಯಾಲಯದ ಮುಂದಿದ್ದ ಮುದ್ದೆಮಾಲು-1 ಮತ್ತು ಮುದ್ದೆಮಾಲು-2 ನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-27.** ಚಾಸಾ.13 ಡಾಃ ರವಿಕುಮಾರ್ ಎಸ್.ಸಿ. ಇವರನ್ನು ಪ್ರಾಸಾ.10 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕ:21-06-2017 ರಂದು ರಾತ್ರಿ 9.30 ಗಂಟೆಗೆ ತಾನು ಬೀರೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಕರ್ತವ್ಯದಲ್ಲಿದ್ದಾಗ, 37 ವರ್ಷದ ಪುರುಷ ಗಾಯಾಳು ಚಂದ್ರಪ್ಪ ರವರು ಹಲ್ಲೆಗೆ ಒಳಗಾದ ಹಿನ್ನಲೆಯಲ್ಲಿ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

ಹೇಳಿದಂತೆ

[signature]

**ಪ್ರಶ್ನೆ-28.** ಪ್ರಾಸಾ.10 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಅವರನ್ನು ಪರೀಕ್ಷಿಸಿದಾಗ ಎದೆಯ ಎಡಭಾಗದಲ್ಲಿ ತಾಜಾ ತರಚಿದ ಗಾಯಗಳು, ತಲೆಯ ಹಿಂಭಾಗದಲ್ಲಿ ನೋವು ಇರುವುದು ಕಂಡುಬಂತುಹಾಗೂ ಎಡಗೈನ ಕಿರುಬೆರಳಿನ ಮೂಳೆ ಮುರಿದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-29.** ಪ್ರಾಸಾ.10 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ತನ್ನ ಅಭಿಪ್ರಾಯದಲ್ಲಿ 1 ಮತ್ತು 2 ನೇ ಗಾಯಗಳು ಸಾಮಾನ್ಯ ಸ್ವರೂಪದ ಗಾಯವಾಗಿದ್ದು, 3 ನೇ ಗಾಯ ತೀವ್ರ ಸ್ವರೂಪದ್ದಾಗಿರುತ್ತದೆ, ಆ ಬಗ್ಗೆ ನಿಪಿ-11 ರಂತೆ ತಾನು ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-30.** ಪ್ರಾಸಾ.10 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ಈ ಮೇಲ್ಕಂಡ ಗಾಯಗಳು ಇಟ್ಟಿಗೆ, ಗಾಜಿನ ಬಾಟಲಿನಿಂದ ಹಲ್ಲೆ ಮಾಡಿದಾಗ ಆಗುವ ಸಾಧ್ಯತೆ ಇರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1 ನೇ ಆರೋಪಿ ಉತ್ತರಃ** ~~ಇಲ್ಲ~~ ಸುಳ್ಳು

**2 ನೇ ಆರೋಪಿ ಉತ್ತರಃ** ಸುಳ್ಳು

**ಪ್ರಶ್ನೆ-31.** ಮೊಕದ್ದಮೆಯಲ್ಲಿ ನಿಮ್ಮ ಪರ ಯಾರನ್ನಾದರೂ ಸಾಕ್ಷಿಗಳನ್ನಾಗಿ ವಿಚಾರಣೆ ಮಾಡುತ್ತೀರಾ?

**1 ನೇ ಆರೋಪಿ ಉತ್ತರಃ** ಇಲ್ಲ

**2 ನೇ ಆರೋಪಿ ಉತ್ತರಃ** ಇಲ್ಲ

**ಪ್ರಶ್ನೆ-32.** ಈ ಮೊಕದ್ದಮೆಯಲ್ಲಿ ನೀವು ಮತ್ತೇನಾದರೂ ಹೇಳುದಿದೆಯೇ?

**1 ನೇ ಆರೋಪಿ ಉತ್ತರಃ** ಇಲ್ಲ

**2 ನೇ ಆರೋಪಿ ಉತ್ತರಃ** ಇಲ್ಲ

(ಮೇಲ್ಕಂಡ ಆರೋಪದ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿ ಆರೋಪಿ ನೀಡಿದ ಉತ್ತರಗಳನ್ನು ಸ್ವತಃ ನಾನೇ ಕೇಳಿಸಿಕೊಂಡು ನನ್ನ ಸ್ವ ಬರವಣಿಗೆಯಲ್ಲಿ ಉತ್ತರಗಳನ್ನು ನಮೂದು ಮಾಡಿರುತ್ತೇನೆ. ಇವು ಆರೋಪಿ ತನ್ನ ಸ್ವ-ಇಚ್ಛೆಯಿಂದ ನೀಡಿರುವ ಉತ್ತರಗಳಾಗಿರುತ್ತವೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ ~~06.02.2026~~ 25/6/26

25/6/26

ಸಮವರ್ತಿ ಪ್ರಭಾರ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕಡೂರು.

ಹೇಳುವಂತೆ.

Yogi.